**C.C.No.800/2024**
**PW.1**

<u>ಸಾಕ್ಷಿಯನ್ನು ದಿನಾಂಕ:**28.04.2025** ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

ಪಾಟೀ ಸವಾಲುಃಆರೋಪಿ ಪರ ಶ್ರೀ. ಎಂ ವಿ ವಕೀಲರಿಂದಃ

ನಾನು ಬಟ್ಟೆ ವ್ಯಾಪಾರವನ್ನು ಬೆಂಗಳೂರಿನ ಜಯನಗರ 4 ನೇ ಬ್ಲಾಕ್ ನಲ್ಲಿ ಬಸ್ ನಿಲ್ದಾಣದ ಎದುರಿಗೆ ರಸ್ತೆ ಬದಿಯಲ್ಲಿ ಮಾಡುತ್ತೇನೆ. ಸಾಕ್ಷಿ ಮುಂದುವರೆದು, ಸದರಿ ವ್ಯಾಪಾರವನ್ನು ಕಾಂಪ್ಲೆಕ್ಸ್ ಖಾಲಿ ಜಾಗದಲ್ಲಿ ಮಾಡುತ್ತೇನೆ. ಸದರಿ ವ್ಯಾಪಾರ ಮಾಡಲು ಮಹಾನಗರ ಪಾಲಿಕೆ ನನಗೆ ಪರವಾನಗಿ ನೀಡಿರುತ್ತದೆ. ಸದರಿ ಕಾಂಪ್ಲೆಕ್ಸ್ ಯಾರ ಮಾಲೀಕತ್ವದು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ವ್ಯಾಪಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ವ್ಯಾಪಾರ ಮಾಡಲು ಮಹಾನಗರ ಪಾಲಿಕೆ ನನಗೆ ನೀಡಿರುವ ಪರವಾನಗಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಮಾಡುವ ವ್ಯಾಪಾರಕ್ಕೆ ಅಕೌಂಟೆಬಿಲಿಟಿ ಇದೆ ಎಂದರೆ ಸರಿ.

2. ನಾನು ಕೆನರಾ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದೇನೆ. ನನ್ನ ವ್ಯಾಪಾರದ ಹಣ ನನ್ನ ಮಾಲೀಕರ ಖಾತೆಗೆ ಹೋಗುತ್ತದೆ. ನಾನು ಮಾಡುವ ವ್ಯಾಪಾರದ ಮಾಲೀಕಳು ನಾನು ಇರುವುದಿಲ್ಲ. ನಾನು ಸದರಿ ವ್ಯಾಪಾರವನ್ನು ಸಂಬಳಕ್ಕಾಗಿ ಮಾಡುತ್ತೇನೆ. ನನಗೆ ತಿಂಗಳಿಗೆ ರೂ.18,000/- ಸಂಬಳ ಬರುತ್ತದೆ. ನನ್ನ ಮಾಲೀಕರು ನನಗೆ ವ್ಯಾಪಾರಕ್ಕಾಗಿ ಏನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಡುತ್ತೇನೆ, ಅದರಂತೆ ನಾನು ವ್ಯಾಪಾರ ಮಾಡಿದ್ದು, ಸದರಿ ವ್ಯಾಪಾರದ ಹಣ ನನ್ನ ಮಾಲೀಕರಿಗೆ ಹೋಗುತ್ತದೆ.

3. ನನ್ನ ಸಂಬಳವನ್ನು ನಗದು ರೂಪದಲ್ಲಿ ನೀಡಲಾಗುತ್ತದೆ. ನನಗೆ ರೂ.18,000/- ಮಾತ್ರ ಆದಾಯ ಇರುತ್ತದೆ ನನ್ನ ತಾಯಿ ಯಶವಂತಪುರದಲ್ಲಿ ಹೂವಿನ ವ್ಯಾಪಾರ ಮಾಡುತ್ತಾರೆ. ನಾನು ಯಶವಂತಪುರದಲ್ಲಿ ನನ್ನ ತಾಯಿಯ ಜೊತೆ 15 ವರ್ಷಗಳಿಂದ ವಾಸವಿದ್ದೇನೆ. ನನಗೆ ಮಕ್ಕಳಿರುವುದಿಲ್ಲ. ನಾವು ವಾಸವಿರುವ ಭೋಗ್ಯದ ಮನೆಯಾಗಿರುತ್ತದೆ. ನಾವು ಭೋಗ್ಯದ ಮನೆಯಲ್ಲಿ ವಾಸವಿರುವ ಕುರಿತು ಭೋಗ್ಯ ಪತ್ರ ನನ್ನ ತಾಯಿಯ ಹೆಸರಿನಲ್ಲಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು 18-19 ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದೇನೆ. ನಾನು ನನ್ನ 8 ನೇ ವಯಸ್ಸಿನಿಂದ ವ್ಯಾಪಾರ ಮಾಡಲು ಆರಂಭಿಸಿದ್ದೆ.

4. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 18-19 ವರ್ಷಗಳ ಹಿಂದೆ ವ್ಯಾಪಾರ ಮಾಡುತ್ತಿದ್ದಾಗ, ನನಗೆ ದಿನಕ್ಕೆ ರೂ.250/- ಗಳು ಆದಾಯ ಬರುತ್ತಿತ್ತು. ನನಗೆ 2021 ಕ್ಕಿಂತ ಹಿಂದೆ ರೂ.15,000/- ಸಂಬಳವಿತ್ತು. ನನ್ನ ಆದಾಯದ ಕುರಿತು ನನ್ನ ಬಳಿ ದಾಖಲೆಗಳಿವೆ. ನನ್ನ ಸಂಬಳದ ಕುರಿತು ನನ್ನ ಮಾಲೀಕರು ಸ್ಲಿಪ್ ಗಳನ್ನು ನೀಡುತ್ತಾರೆ. ನನ್ನ ಮಾಲೀಕರು ನೀಡುತ್ತಿದ್ದ ಹಣವನ್ನು ಬ್ಯಾಂಕಿಗೆ ಸಲ್ಲಿಸುತ್ತಿರಲಿಲ್ಲ.

5. ಬೆಂಗಳೂರಿನಲ್ಲಿ ಒಬ್ಬ ವ್ಯಕ್ತಿಗೆ ಜೀವನ ನಡೆಸಲು ಕನಿಷ್ಟ ರೂ.10,000/- ಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು, ತನ್ನ ಮನೆಯ ನಿರ್ವಹಣೆಯನ್ನು ತನ್ನ ತಾಯಿ ಮತ್ತು ಅಕ್ಕ ನೋಡಿಕೊಳ್ಳುತ್ತಿದ್ದು, ತನ್ನ ಸಂಬಳವನ್ನು ತಾನು ಸಂಪೂರ್ಣ ಉಳಿತಾಯ

ಮಾಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ನಾನು 18-19 ವರ್ಷಗಳಿಂದ ದುಡಿದ ಹಣವನ್ನು ಚೀಟಿ ಹಾಕುವುದು ಮಾಡುವುದು ಈ ರೀತಿ ಮಾಡಿ ಉಳಿಸಿಕೊಳ್ಳುತ್ತಿದ್ದೆ. ನಾನು ಚೀಟಿಯನ್ನು ನನ್ನ ಮಾಲೀಕರ ಸ್ನೇಹಿತ ರಾಜಣ್ಣನವರ ಹತ್ತಿರ ಹಾಕಿದ್ದೆ. ಸದರಿ ಚೀಟಿ ಹಣವನ್ನು ನಗದು ರೂಪದಲ್ಲಿ ಕಟ್ಟುತ್ತಿದ್ದೆ. ಸದರಿ ಚೀಟಿ ಕಟ್ಟುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

6. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಮೊದಲ ಬಾರಿ ಐದು ವರ್ಷಗಳ ಹಿಂದೆ ಯಶವಂತಪುರದಲ್ಲಿ ನೋಡಿರುತ್ತೇನೆ. ಆರೋಪಿಯು ಭೂಮಿಯನ್ನು ಬೇರೆಯವರಿಗೆ ಮಾರಾಟ ಮಾಡುವ ಕೆಲಸ ಮಾಡುತ್ತಾರೆ. ಆರೋಪಿಯು ನಮ್ಮ ಭೂಮಿಯನ್ನು ಖರೀದಿ ಮಾಡಿರುತ್ತಾರೆ. ಆರೋಪಿಯು ನನ್ನ ತಾತನ ಆಸ್ತಿಯನ್ನು ನಮ್ಮ ಚಿಕ್ಕಪ್ಪ ಚಿಕ್ಕಮ್ಮನ ಕಡೆಯಿಂದ ಖರೀದಿ ಮಾಡಿದ್ದು, ಆ ರೀತಿ ಖರೀದಿ ಮಾಡಿದ ವರ್ಷ ಮತ್ತು ನೊಂದಣಿಯಾದ ಸ್ಥಳ ನನಗೆ ಗೊತ್ತಿಲ್ಲ.

7. ಕುಣಿಗಲ್ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿರುವ ಅಸಲು ದಾವೆ ಸಂ.706/2023 ರಲ್ಲಿ ನಾನು 24 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿ. ಸದರಿ ದಾವೇಯಲ್ಲಿ ನನ್ನ ತಾಯಿ ಮತ್ತು ಅಕ್ಕಂದಿರು ಸಹ ಪ್ರತಿವಾದಿಗಳಾಗಿರುತ್ತಾರೆ ಎಂದರೆ ಸರಿ. ಸದರಿ ದಾವೇಗಳ ವಿಚಾರಗಳು ನನಗೆ ಗೊತ್ತಿಲ್ಲ. ದಿನಾಂಕ 01.09.2023 ರಲ್ಲಿ ಆರೋಪಿಗೆ ಆದ ಕ್ರಯ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸಹಿ ಮಾಡಿದ್ದು,

ಆದರೆ ಅದರ ವಿಚಾರಗಳು ನನಗೆ ತಿಳಿದಿರುವುದಿಲ್ಲ, ತನ್ನ ತಾಯಿ ಸಹಿ ಮಾಡಲು ಹೇಳಿದ ಕಾರಣ, ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಕ್ರಯ ಪತ್ರದಂತೆ ಕ್ರಯದ ಮೊಬಲಗು ಇತ್ಯರ್ಥವಾಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ನಡೆಮಾವಿನಪುರದ ಸರ್ವೆ ನಂ.171 ರಲ್ಲಿ 1 ಎಕರೆ 12 ¾ ಗುಂಟೆ ವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆರೋಪಿ ಕ್ರಯದ ಕುರಿತು ನನಗೆ ಯಾವುದೇ ಹಣ ನೀಡಿರುವುದಿಲ್ಲ.

8. ಜಗದೀಶ್ ಮತ್ತು ಅಶೋಕ್ ಎನ್ನುವವರು ನನಗೆ ಪರಿಚಯಸ್ಥರು ಎಂದರೆ ಸರಿ. ಸದರಿಯವರಿಬ್ಬರು ಯಶವಂತಪುರದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಸದರಿಯವರಿಬ್ಬರು ಆರೋಪಿಯ ಕ್ರಯಪತ್ರದ ವ್ಯವಹಾರ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.1,3 ಮತ್ತು 5 ನ್ನು ಆರೋಪಿಯು ಕುಣಿಗಲ್ ನಲ್ಲಿ ನಾಗೇಗೌಡನಪಾಳ್ಯದ ನಮ್ಮ ಅಜ್ಜಿ ಮನೆಯಲ್ಲಿ ನೀಡಿರುತ್ತಾರೆ. ಸದರಿ ಚೆಕ್ಕುಗಳನ್ನು 28.12.2023 ರಲ್ಲಿ ನೀಡಿರುತ್ತಾರೆ. ಸದರಿ ಸಮಯದಲ್ಲಿ ನನ್ನ ತಾಯಿ ಸಹ ಇದ್ದರು.

9. ಆರೋಪಿಯು ತನ್ನ ಮೂರು ಚೆಕ್ಕುಗಳನ್ನು ಜಮೀನಿನ ಕ್ರಯದ ಹಣದ ಬಾಬ್ತು ಅಶೋಕ್ ಮತ್ತು ಜಗದೀಶ್ ರವರಿಗೆ ಸೆಟಲ್ ಮಾಡಿಸಿಕೊಡಲು ನೀಡಿದ್ದರು ಎಂದರೆ ಸರಿಯಲ್ಲ. ವಸಂತಮ್ಮ ನನ್ನ ಅಜ್ಜಿಯಾಗಬೇಕು. ಕ್ರಯ ಪತ್ರದ ಸಮಯದಲ್ಲಿ ವಸಂತಮ್ಮ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಈ

ಪ್ರಕರಣದ ವ್ಯವಹಾರ ಸರ್ವೆ ನಂ.171 ಕ್ಕೆ ಸಂಬಂಧಿಸಿದ್ದಾಗಿದ್ದು, ನಾನು ಹೇಳುವಂತೆ ಆರೋಪಿ ನಾನು ಹೇಳುವಂತೆ ನನ್ನಿಂದ ಯಾವುದೇ ಸಾಲ ಪಡೆದಿರುವುದಿಲ್ಲ ಮತ್ತು ಅದರ ತೀರುವಳಿಗಾಗಿ ಯಾವುದೇ ಚೆಕ್ಕು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ರೂ.15 ಲಕ್ಷ ಸಾಲ ನೀಡುವಷ್ಟ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಆಗ ತಾನೇ ಚೀಟಿ ಹಣ ಬಂದಿತ್ತು, ಆ ಕುರಿತು ದಾಖಲೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಖಾತೆಗೆ ನೇರವಾಗಿ ಹಣ ವರ್ಗಾಯಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

10. ಆರೋಪಿಗೆ ನೀಡಿದ ರೂ.15 ಲಕ್ಷ ಹಣದಲ್ಲಿ ರೂ.500 ಮತ್ತು ರೂ.100 ಮುಖಬೆಲೆಯ ನೋಟುಗಳಿದ್ದವು. ಸದರಿ ಹಣದ ಪೈಕಿ ರೂ.8 ಲಕ್ಷ ನನಗೆ ಚೀಟಿಯವರು ನೀಡಿದ್ದಾಗಿರುತ್ತದೆ, ಉಳಿಕೆ ಹಣದಲ್ಲಿ ರೂ.5 ಲಕ್ಷ ನನ್ನ ತಾಯಿ ನೀಡಿದ್ದು ಮತ್ತು ಉಳಿದ ರೂ.3 ಲಕ್ಷ ನಾನು ಉಳಿತಾಯ ಮಾಡಿದ ಹಣವಾಗಿರುತ್ತದೆ. ರೂ.20,000/-ಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ನೀಡುವಂತಿಲ್ಲ ಎಂದು ನಿಯಮ ಇದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

11. ನಾನು ಆದಾಯ ತೆರಿಗೆ ಪಾವತಿದಾರಳಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.171 ರ ಕುರಿತು ಅಸಲು ದಾವೇ ಸಂ.272/2019 ಇದ್ದು, ಅದರಲ್ಲಿ ನಾನು 11 ನೇ ಪ್ರತಿವಾದಿ ಇದ್ದೇನೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

ಸದರಿ ದಾವೇಯಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿರುತ್ತೇನೆ. ನನ್ನ ಬಳಿ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಯನ್ನು ಮುಂದಿನ ದಿನಾಂಕದಲ್ಲಿ ಹಾಜರುಪಡಿಸಬಲ್ಲೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್